**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟ, ಉಪಸ್ಥಿತಿ- ಜಮಖಂಡಿ</u>**

**ಸೇಷನ್ಸ್ ಕೇಸ್ ನಂ. 5035/2025**
**ಪಿಡಬ್ಲ್ಯೂ-1**
**ಸಿಡಬ್ಲ್ಯೂ-1**

ಹೆಸರು - ರಮೇಶ ತಂದೆ ಪರಶುರಾಮ ಮಾಂಗ

ವಯಸ್ಸು - 24 ವರ್ಷ

ಉದ್ಯೋಗ - ಕೂಲಿಕೆಲಸ

ವಾಸಸ್ಥಳ - ಮುತ್ತೂರ, ತಾಃಜಮಖಂಡಿ

====

**<u>ಸಾಕ್ಷಿಗೆ ಇಂದು ದಿನಾಂಕ 03.02.2026 ರಂದು ಪ್ರಮಾಣವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ</u>**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಂದೆಯ ಅಣ್ಣನ ಮಗ. ಮೃತ ಶೋಭಾ ನನ್ನ ತಾಯಿ. ಚಾ.ಸಾ.7 ನನ್ನ ತಮ್ಮ, ಚಾ.ಸಾ.8 ನನ್ನ ತಂಗಿ, ಚಾ.ಸಾ.9 ನನ್ನ ತಂಗಿಯ ಗಂಡ. ಚಾ.ಸಾ.10 ರಿಂದ 12 ರವರು ನನ್ನ ಪರಿಚಯದವರು.

2. ನನ್ನ ತಾಯಿ ತೀರಿಕೊಂಡು 1 ವರ್ಷ ಆಗಿದೆ. ಆರೋಪಿತ ನನ್ನ ತಾಯಿಯನ್ನು ಹೊಡೆದಿದ್ದರಿಂದ ನಮ್ಮ ತಾಯಿ ತೀರಿಕೊಂಡಿದ್ದಾರೆ. ಕೊಲೆಯಾದ ದಿನ ನನ್ನ ತಾಯಿ ನಮ್ಮ ಮನೆಯಲ್ಲಿಯೇ ಇದ್ದರು, ನಮ್ಮ ತಾಯಿ ಒಬ್ಬರೇ ಇದ್ದರು. ನನ್ನ ತಂದೆ ತೀರಿಕೊಂಡು 9 ವರ್ಷ ಆಗಿದೆ. ನನ್ನ ತಂದೆ-ತಾಯಿಗೆ ನಾನು, ಉಮೇಶ ಮತ್ತು ರೇಣುಕಾ ಎನ್ನುವ ನಾವು 3 ಜನ ಮಕ್ಕಳು. ನನ್ನ ತಂಗಿ ರೇಣುಕಾಳ ಮದುವೆ ಆಗಿ 4 ವರ್ಷ ಆಗಿದೆ. ನಾನು, ನನ್ನ ತಮ್ಮ ಉಮೇಶ ಹಾಗೂ ತಾಯಿ ಬೇರೆ ಬೇರೆ ಮನೆಗಳಲ್ಲಿ ವಾಸವಿದ್ದೆವು.

3. ದಿನಾಂಕ 07.01.2025 ರಂದು ಮುಂಜಾನೆ 9.30 ಗಂಟೆಗೆ ನಾನು ಪಿ.ಎಂ.ಬುದ್ನಿ ಯಲ್ಲಿ ಕೂಲಿಕೆಲಸ ಮಾಡುತ್ತಿದ್ದಾಗ, ಚಾ.ಸಾ.10 ಕಲ್ಲಪ್ಪ ರವರು ಫೋನ್ ಮಾಡಿ, ನಿಮ್ಮ ತಾಯಿ ಕೊಲೆಯಾಗಿದ್ದಾರೆ ಎಂದು ನನಗೆ ಹೇಳಿದರು. ಆಗ ನಾನು ನಮ್ಮ ತಾಯಿಯಿದ್ದ ಮುತ್ತೂರ ಗ್ರಾಮಕ್ಕೆ ಬಂದೆ. ನಾನು ಹಾಗೂ ನನ್ನ ತಮ್ಮ

ಉಮೇಶ ಮನೆಯ ಒಳಗೆ ಹೋಗಿ ನಮ್ಮ ತಾಯಿಯನ್ನು ನೋಡಿದೆವು. ನಮ್ಮ ತಾಯಿಯ ತಲೆಗೆ ಪೆಟ್ಟಾಗಿತ್ತು, ಕೈಯಲ್ಲಿದ್ದ ಬಳೆಗಳು ಒಡೆದಿದ್ದವು. ನನ್ನ ತಾಯಿ ಆಗ ತೀರಿಕೊಂಡಿದ್ದಳು. ಸ್ಥಳದಲ್ಲಿ ಎರಡು ಕಟ್ಟಿಗೆ ತುಂಡುಗಳು ಬಿದ್ದಿದ್ದವು.

4. ನನ್ನ ತಾಯಿ ಸಾಯುವುದಕ್ಕಿಂತ 2 ವರ್ಷಗಳ ಹಿಂದೆಯೂ ಸಹ ಆರೋಪಿ ನನ್ನ ತಾಯಿಗೆ ಹೊಡಿಬಡಿ ಮಾಡಿದ್ದ. ಆದ್ದರಿಂದ ಆರೋಪಿಯ ಮೇಲೆ ನನಗೆ ಸಂಶಯ ಬಂತು. ನನ್ನ ತಾಯಿ ಮಾಟ-ಮಂತ್ರ ಮಾಡುತ್ತಾಳೆ ಎಂದು ಆರೋಪಿ ನನ್ನ ತಾಯಿಯ ಮೇಲೆ ಸಿಟ್ಟಾಗಿದ್ದ. ಸದರಿ ಆರೋಪಿ ಹಲ್ಲೆ ಮಾಡಿದ್ದ ಬಗ್ಗೆ ನನ್ನ ತಾಯಿ ನನಗೆ ಹೇಳುತ್ತಿದ್ದಳು.

5. ನಂತರ ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನಾನು ಭೀಮಪ್ಪ ಜಿ.ಮುಂಡಗನೂರ ರವರಿಂದ ಬರೆಸಿದ್ದೇನೆ. ಸದರಿ **ದೂರು ನಿ.ಪಿ.1 ರಂತೆ, ನನ್ನ ಸಹಿ ನಿ.ಪಿ.1(ಎ)** ರಂತೆ ಇದೆ. ನನ್ನ ತಾಯಿಯ ಶವಪಂಚನಾಮೆ ಕಾಲಕ್ಕೆ ತೆಗೆದ **ಫೋಟೋಗಳನ್ನು** ಈಗ ನೋಡುತ್ತಿದ್ದೇನೆ. ಅವು **ನಿ.ಪಿ.2 ರಿಂದ ನಿ.ಪಿ.5** ರಂತೆ ಇವೆ.

6. ಗುನ್ಹೆಜಾಗೆಯ ಪಂಚನಾಮೆಯ ಸಮಯದಲ್ಲಿ ನಮ್ಮ ಮನೆಯಲ್ಲಿ ತೆಗೆದ **ಫೋಟೋಗಳನ್ನು** ನೋಡುತ್ತಿದ್ದೇನೆ. ಅವು **ನಿ.ಪಿ.6 ರಿಂದ 8** ರವರೆಗೆ ಇವೆ. ನಾನು ಆ ದಿನ ಸ್ಥಳದಲ್ಲಿ ನೋಡಿದ ಎರಡು **ಕಟ್ಟಿಗೆಯ ತುಂಡುಗಳು ಮು.ಮಾ.1 ಮತ್ತು 2** ರಂತೆ ಇವೆ. ನನ್ನ ತಾಯಿಯ ಕೈಯಲ್ಲಿದ್ದ **ಒಡೆದ ಬಳೆಯ ಚೂರುಗಳನ್ನು** ಈಗ ನೋಡುತ್ತಿದ್ದು, ಅವು **ಮು.ಮಾ.3** ರಂತೆ ಇವೆ. ನನ್ನ ತಾಯಿ ಮರಣದ ಸಮಯದಲ್ಲಿ ತೊಟ್ಟುಕೊಂಡಿದ್ದ **ಸೀರೆ** ಈಗ ನೋಡುತ್ತಿದ್ದು, ಅದು **ಮುಮಾ.4** ರಂತೆ ಇದೆ. ನಾನು ದೂರು ನೀಡಿದ ನಂತರ ಪೋಲಿಸರು ಘಟನಾಸ್ಥಳಕ್ಕೆ ಬಂದು, ಶವಪಂಚನಾಮೆ ಮಾಡಿ, ಮರಣೋತ್ತರ ಪರೀಕ್ಷೆ ಮಾಡಿದ ನಂತರ ನನ್ನ ತಾಯಿಯ ಮೃತ ದೇಹವನ್ನು ಪೋಲಿಸರು ಅಂತಿಮ ಸಂಸ್ಕಾರಕ್ಕಾಗಿ ನಮಗೆ ಒಪ್ಪಿಸಿರುತ್ತಾರೆ. ಫಿರ್ಯಾದಿ ನೀಡಿದ ದಿನದಂದೇ ಪೋಲಿಸರು ನನ್ನ ಹೇಳಿಕೆ ಪಡೆದಿರುತ್ತಾರೆ.

**ಪಿಡಬ್ಲ್ಯೂ-1**
**ಸಿಡಬ್ಲ್ಯೂ-1**

7. 08.01.2025 ರಂದು ಪೋಲಿಸರು ಆರೋಪಿಯನ್ನು ಕೊಲೆಯಾದ ಜಾಗಕ್ಕೆ ಕರೆದುಕೊಂಡು ಬಂದಿದ್ದರು. ನನ್ನ ತಾಯಿ ಸ್ನಾನ ಮಾಡುವಾಗ ಆರೋಪಿ ನನ್ನ ತಾಯಿಯನ್ನು ಕೊಲೆಮಾಡಿದ್ದ ಎಂದು ತಾನೇ ಹೇಳಿದ್ದ ಹಾಗೂ ಪಂಚನಾಮೆಯನ್ನು ವಿಡಿಯೋ ಮಾಡಿಕೊಂಡಿದ್ದಾರೆ. ಈ ಬಗ್ಗೆ ನಾನು ಪೋಲಿಸರಿಗೆ ಮರುಹೇಳಿಕೆ ಕೊಟ್ಟಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವ್ಹಿ ಬಿ ವಕೀಲರಿಂದ**

8. ನಾನು 9 ನೇ ತರಗತಿವರೆಗೆ ಕಲಿತಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಘಟನೆಯನ್ನು ಕಣ್ಣಾರೆ ನೋಡಿಲ್ಲ. ಚಾ.ಸಾ.10 ರವರು ನನಗೆ ನೀಡಿದ ಮಾಹಿತಿಯ ಆಧಾರದ ಮೇಲೆ ನಾನು ದೂರು ನೀಡಿದ್ದೇನೆ ಅಂದರೆ ಸರಿ. 2 ವರ್ಷದ ಹಿಂದೆ ಆರೋಪಿ ನನ್ನ ತಾಯಿಯನ್ನು ಹೊಡಿಬಡಿ ಮಾಡಿದ್ದ ಬಗ್ಗೆ ನಾನು ಯಾವುದೇ ದೂರು ನೀಡಿಲ್ಲ. ನಾನು ಬುದ್ನಿಯಲ್ಲಿ 9 ವರ್ಷದಿಂದ ವಾಸಿಸುತ್ತಿದ್ದೇನೆ. ನನ್ನ ತಮ್ಮ ಉಮೇಶ ಬಹಳ ದಿನಗಳಿಂದ ಜಮಖಂಡಿಯಲ್ಲಿ ಇದ್ದಾರೆ. ನನ್ನ ತಂಗಿ ಮದುವೆಯಾದ ನಂತರ ಅವರ ಗಂಡನ ಮನೆಯಲ್ಲಿ ಇದ್ದಾರೆ. ನನ್ನ ತಾಯಿಯ ಬಳಿ ಮೊಬೈಲ್ ಇತ್ತು. ಪಂಚನಾಮೆ ಮಾಡುವಾಗ ಮೊಬೈಲ್ ಸ್ಥಳದಲ್ಲಿಯೇ ಇತ್ತು. ನಾನು ಸದರಿ ಮೊಬೈಲನ್ನು ಪೋಲಿಸರಿಗೆ ಕೊಟ್ಟಿದ್ದೆ, ಪೋಲಿಸರು 4 ದಿನ ಬಿಟ್ಟು ಮತ್ತೇ ಮೊಬೈಲ್ ನನಗೆ ಮರಳಿ ಕೊಟ್ಟರು. ಈ ವಿಷಯವನ್ನು ನಾನು ಫಿರ್ಯಾದಿಯಲ್ಲಿ ಹೇಳಿ ಬರೆಸಿಲ್ಲ.

9. ನಾನು ಸ್ಥಳಕ್ಕೆ ಹೋದಾಗ ಚಾ.ಸಾ.10 ಸ್ಥಳದಲ್ಲಿ ಇರಲಿಲ್ಲ. ಆದರೆ ಓಣಿಯವರು ಇದ್ದರು. ಓಣಿಯವರು ಆರೋಪಿ ನನ್ನ ತಾಯಿಗೆ ಹಲ್ಲೆ ಮಾಡಿದ ಬಗ್ಗೆ ಹೇಳಿಲ್ಲ. ಮು.ಮಾ.1 ಮತ್ತು 2 ನ್ನು ಬಾಗಿಲು ಪಟ್ಟಿಗಾಗಿ ಉಪಯೋಗಿಸುತ್ತಾರೆ. ಆರೋಪಿ ಕೂಲಿಕೆಲಸ ಮಾಡುತ್ತಾನೆ. ನನ್ನ ತಾಯಿ ಸಹ ಕೂಲಿಕೆಲಸ ಮಾಡುತ್ತಿದ್ದಳು. ನಮ್ಮ ತಾಯಿ ಕಳೆ ತೆಗೆಯುವ ಕೆಲಸ ಮಾಡುತ್ತಿದ್ದಳು. ನಮ್ಮ ಮನೆಯಲ್ಲಿ ಕಟ್ಟಿಗೆಯಿಂದ ನೀರು ಕಾಯಿಸಿಕೊಂಡು ನಮ್ಮ ತಾಯಿ ಸ್ನಾನ ಮಾಡುತ್ತಿದ್ದರು. ಮು.ಮಾ.1 ಮತ್ತು 2 ರಂತಹ ಕಟ್ಟಿಗೆಗಳಿಂದ ಸಹ ಒಲೆ ಹಚ್ಚಬಹುದು ಅಂದರೆ ಸರಿ.

10. ಆರೋಪಿ ನಮ್ಮ ತಾಯಿಗೆ ಕಟ್ಟಿಗೆಯಿಂದ ಹಲ್ಲೆ ಮಾಡಿಲ್ಲ ಅಂದರೆ ಸರಿಯಲ್ಲ. ನಮ್ಮ ಮನೆಯ ಮುಖ್ಯಬಾಗಿಲು ಕಟ್ಟಿಗೆಯದು ಇತ್ತು ಅಂದರೆ ಸರಿ, ಅದಕ್ಕೆ ಮನೆಯ ಒಳಗಿನಿಂದ ಚಿಲಕ ಹಾಕಬಹುದು ಅಂದರೆ ಸರಿ. ಸ್ನಾನ ಮಾಡುವಾಗ ಬಾಗಿಲು ಹಾಕಿಕೊಂಡು ಮಾಡುತ್ತಾರೆ ಅಂದರೆ ಸರಿ.

11. ನಾನು ನನ್ನ ಫಿರ್ಯಾದಿಯಲ್ಲಿ ಚಾ.ಸಾ.10 ರವರು ಮನೆಯ ಬಾಗಿಲನ್ನು ತಳ್ಳಿ ಒಳಗೆ ಶವವನ್ನು ನೋಡಿ, ನನಗೆ ಫೋನ್ ಮಾಡಿದರು ಎಂದು ನಾನು ನನ್ನ ಫಿರ್ಯಾದಿಯಲ್ಲಿ ಹೇಳಿದ್ದೇನೆ. ಚಾ.ಸಾ.10 ರವರು ಜೋರಾಗಿ ಬಾಗಿಲನ್ನು ತಳ್ಳಿದ ಮೇಲೆ ಅದರಿಂದ ಬಾಗಿಲು ನನ್ನ ತಾಯಿಯ ತಲೆಗೆ ಬಡಿದು, ಪೆಟ್ಟಾಗಿ ನನ್ನ ತಾಯಿ ತೀರಿಕೊಂಡಿದ್ದಾರೆ ಅಂದರೆ ಸರಿಯಲ್ಲ. ಆರೋಪಿ ನನ್ನ ತಾಯಿಗೆ ಹೊಡೆದ ವಿಡಿಯೋ ಇಲ್ಲ. ನಾನು ಹೇಳಿಕೆಯನ್ನು 7 ನೇ ತಾರೀಖಿನಂದೇ ನೀಡಿದ್ದೇನೆ.

12. ನನ್ನ ತಾಯಿ ಬಚ್ಚಲುಮನೆಯಿಂದ ಹೊರಗೆ ಬಂದಾಗ, ಅವರ ಮೈಮೇಲೆ ಕೇವಲ ಒಂದು ಸೀರೆ ಇತ್ತು ಅಂದರೆ ಸರಿ. ಗಡಿಬಿಡಿಯಲ್ಲಿ ಯಾರಾದರೂ ಬಾಗಿಲು ಬಡಿದಾಗ, ಅಥವಾ ಬೇಗ ಕರೆದಾಗ, ಬಚ್ಚಲುನಿಂದ ಬರುವಾಗ ಕೇವಲ ಸೀರೆ ಹಾಕಿಕೊಂಡು ಬರುತ್ತಾರೆ, ಬೇರೆ ಸಮಯದಲ್ಲಿ ಎಲ್ಲಾ ಉಡುಪುಗಳನ್ನು ಹಾಕಿಕೊಂಡು ಬರುತ್ತಾರೆ ಅಂದರೆ ಸರಿ. ನನ್ನ ತಾಯಿ ಬಚ್ಚಲುಮನೆಯಿಂದ ಬಂದು, ಬಾಗಿಲು ಚಿಲಕ ತೆಗೆದ ತಕ್ಷಣ, ಚಾ.ಸಾ.10 ರವರು ಜೋರಾಗಿ ಬಾಗಿಲನ್ನು ತಳ್ಳಿದಾಗ, ಬಾಗಿಲಿನ ಹೊಡೆತ ನನ್ನ ತಾಯಿಯ ತಲೆಗೆ ಬಿದ್ದು, ಅವರು ಮೃತಪಟ್ಟಿದ್ದಾರೆ ಅಂದರೆ ಸರಿಯಲ್ಲ. ಆಗ ಚಾ.ಸಾ.10 ರವರು ನನ್ನ ತಾಯಿಯ ತಲೆಗೆ ಹತ್ತಿಯನ್ನು ಹಚ್ಚಿದ್ದಾರೆ ಅಂದರೆ ಸರಿಯಲ್ಲ. ನಂತರವೂ ಸಹ ರಕ್ತ ನಿಲ್ಲದೇ, ನಮ್ಮ ತಾಯಿ ಪಜ್ಞೆತಪ್ಪಿ ಕೆಳಗೆ ಬಿದ್ದಾಗ, ನಮ್ಮ ತಾಯಿಯ ಕೈಯಲ್ಲಿದ್ದ ಬಳೆಗಳು ಒಡೆದಿವೆ ಅಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲದಿದ್ದರೂ ಸಹ ಚಾ.ಸಾ.10 ರವರು ನೈಜ ಸ್ಥಿತಿಯನ್ನು ಮರೆಮಾಚಿ, ನನ್ನ ಮುಂದೆ ಸುಳ್ಳು ಮಾಹಿತಿ ನೀಡಿದ್ದಾರೆ ಅಂದರೆ

ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡಿಲ್ಲದಿದ್ದರೂ, ಒಂದು ಕಾಲ್ಪನಿಕ ಕಥೆ ಕಟ್ಟಿಕೊಂಡು, ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿ, ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ.ಕೇ. ಸರಿ ಅದೆ.

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2026.02.04 11:09:02 +0530

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.

**<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟೆ, ಉಪಸ್ಥಿತಿ- ಜಮಖಂಡಿ</u>**

**ಸೇಷನ್ಸ್ ಕೇಸ್ ನಂ. 5035/2025**
**ಪಿಡಬ್ಲ್ಯೂ-2**
**ಸಿಡಬ್ಲ್ಯೂ-2**

ಹೆಸರು - ಹಣಮಂತ ಸದಾಶಿವ ಕಾಂಬಳೆ

ವಯಸ್ಸು - 50 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ಮುತ್ತೂರ, ತಾಃ ಜಮಖಂಡಿ

====

**<u>ಸಾಕ್ಷಿಗೆ ಇಂದು ದಿನಾಂಕ 03.02.2026 ರಂದು ಪ್ರಮಾಣವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ</u>**

ಆರೋಪಿ ನನಗೆ ಗೊತ್ತು. ಮೃತ ಶೋಭಾ ನನಗೆ ಗೊತ್ತು. ಸುಮಾರು 1 ವರ್ಷದ ಹಿಂದೆ ಶೋಭಾ ತೀರಿಕೊಂಡ ಸುದ್ದಿ ತಿಳಿದು ಅವರ ಮನೆಗೆ ಹೋಗಿದ್ದೆ. ಆಗ ಸ್ಥಳಕ್ಕೆ ಪೋಲಿಸರು ಬಂದಿದ್ದರು. ಶವಪಂಚನಾಮೆ ಮಾಡುವಾಗ 5.30 -6.00 ಗಂಟೆ ಆಗಿತ್ತು. ಆಗ ನನ್ನ ಜೊತೆ ಇನ್ನೊಬ್ಬ ಪಂಚ ಮಲ್ಲಿಕಾರ್ಜುನ ಸಹ ಇದ್ದ. ಮೃತಳ ಶವ ಮನೆಯ ಮೊದಲನೇ ಕೋಣೆಯಲ್ಲಿತ್ತು. ನಿ.ಪಿ.2 ರಿಂದ 5 ಫೋಟೋಗಳು ಶವಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳಾಗಿರುತ್ತವೆ. **ಶವಪಂಚನಾಮೆ ನಿ.ಪಿ.9** ರಂತೆ ಇದ್ದು, ನನ್ನ **ಸಹಿ ನಿ.ಪಿ.9(ಎ)** ರಂತೆ ಇದೆ. ಅದೇ ಸ್ಥಳದಲ್ಲಿ **ಸ್ಥಳ ಪಂಚನಾಮೆ** ಮಾಡಿರುತ್ತಾರೆ, ಅದು **ನಿ.ಪಿ.10 ರಂತೆ ಇದ್ದು, ನನ್ನ ಸಹಿ ನಿ.ಪಿ.10(ಎ)** ರಂತೆ ಇದೆ. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳು ನಿ.ಪಿ.6 ರಿಂದ 8 ರಂತೆ ಇವೆ. ಸ್ಥಳದಲ್ಲಿ ಕಟ್ಟಿಗೆ ತೆಗೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಮು.ಮಾ.1 ಮತ್ತು 2 ರ ಮೇಲೆ ಇರುವ ಚೀಟಿಯಲ್ಲಿರುವ ತಮ್ಮ ಸಹಿಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ಸ್ಥಳದಲ್ಲಿ ಬಿದ್ದಿದ್ದ ಬಳೆಚೂರುಗಳು ಮು.ಮಾ.3 ರಂತೆ ಇವೆ. ಪೋಲಿಸರು ಸ್ಥಳದಲ್ಲಿ ಮತ್ತೇನು ಮಾಡಿದರು ನನಗೆ ಗೊತ್ತಿಲ್ಲ. ಅದೇ ದಿನ ಪೋಲಿಸರು ನನ್ನ ಇನ್ನೊಂದು ಸಹಿ ಪಡೆದಿದ್ದಾರೆ. ಸದರಿ ಪಂಚನಾಮೆ ನಿ.ಪಿ.11 ರಂತೆ, ನನ್ನ ಸಹಿ ನಿ.ಪಿ.11(ಎ) ರಂತೆ ಇದೆ. ನಿ.ಪಿ.11 ರಡಿ ಏನು ಜಪ್ತು ಮಾಡಿದರು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಪ್ರಸ್ತುತ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ**

2. ನಿ.ಪಿ.10 ಪಂಚನಾಮೆ ಮಾಡುವಾಗ ಸಮಯ ಸಾಯಂಕಾಲ 6.27 ರಿಂದ 7.27 ರ ವರೆಗೆ ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. ಸ್ಥಳದಲ್ಲಿ ರಕ್ತಹತ್ತಿದ ಒಂದು ಹತ್ತಿಯ ಸ್ಯಾಂಪಲ್ ಪಡೆದರು ಅಂದರೆ ನನಗೆ ಗೊತ್ತಿಲ್ಲ, ಆದರೆ ಅದರ ಮೇಲಿರುವ ಸಹಿ ನನ್ನದು. ಸದರಿ **ರಕ್ತಹತ್ತಿದ ಹತ್ತಿಯ ಸ್ಯಾಂಪಲ್ ಮು.ಮಾ.5** ಎಂದು ಗುರ್ತಿಸಲಾಯಿತು ಮತ್ತು **ಮಾದರಿ ಹತ್ತಿ ಮುಮಾ.6** ರಂತೆ ಇದೆ.

3. ನಂತರ ಪೋಲಿಸರು ಅದೇ ದಿನ ರಾತ್ರಿ 9.30 ಗಂಟೆಗೆ ಠಾಣೆಗೆ ಕರೆದುಕೊಂಡು ಹೋಗಿ, ಠಾಣೆಯಲ್ಲಿ ಮೃತಳ ಮೈಮೇಲಿನ ಸೀರೆಯನ್ನು ಜಪ್ತುಮಾಡಿಕೊಂಡರು ಅಂದರೆ ನನಗೆ ಗೊತ್ತಿಲ್ಲ. ಸದರಿ ಸೀರೆ ಮು.ಮಾ.4 ರಂತೆ ಇದೆ ಅಂದರೆ ನನಗೆ ಗೊತ್ತಿಲ್ಲ. ನಿ.ಪಿ.11 ರ ಮುಖಾಂತರ ಮು.ಮಾ.4 ನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವ್ಹಿ ಬಿ ವಕೀಲರಿಂದ**

4. ನಾನು 11 ರಿಂದ 12 ಗಂಟೆಯ ಸಮಯದಲ್ಲಿ ಶವಪಂಚನಾಮೆ ಮಾಡುವಲ್ಲಿ ಹೋಗಿದ್ದೆ. ಅಲ್ಲಿ ಸಾಕಷ್ಟು ಜನ ಇದ್ದರು. ಸಾಯಂಕಾಲದ ವರೆಗೆ ಜನ ಅಲ್ಲಿ ಇದ್ದರು ಅಂದರೆ ಸರಿಯಲ್ಲ. ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಿ.ಪಿ.9 ರಿಂದ 11 ರಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ. ಖಾಲಿ ಹಾಳೆಯಲ್ಲಿ ದಿನಾಂಕ 07.01.2025 ರಂದು ನಾನು ಸಹಿ ಮಾಡಿದ್ದೇನೆ ಅಂದರೆ ಸರಿ. ಆ ಎಲ್ಲಾ ಸಹಿಗಳನ್ನು ನಾನು ಕೃತ್ಯಸ್ಥಳದಲ್ಲಿಯೇ ಮಾಡಿದ್ದೇನೆ. ನಂತರದ ದಿನಗಳಲ್ಲಿ ಪೋಲಿಸರು ನನ್ನ ಯಾವುದೇ ಸಹಿ ಪಡೆದಿಲ್ಲ.

**ಪಿಡಬ್ಲ್ಯೂ-2**
**ಸಿಡಬ್ಲ್ಯೂ-2**

5. ಮನೆಯ ಒಳಗೆ ಬಚ್ಚಲು ಇತ್ತು ಅಂದರೆ ನನಗೆ ಗೊತ್ತಿಲ್ಲ. ಪೋಲಿಸರು ಫೋಟೋಗಳಲ್ಲಿ ನಿಲ್ಲಿಸಿಕೊಂಡು ನನಗೆ ಸಾಕ್ಷಿ ಸಹಿ ಹಾಕು ಅಂದಿದ್ದರಿಂದ ನಾನು ಸಹಿ ಹಾಕಿರುತ್ತೇನೆ. ಮು.ಮಾ.1 ಮತ್ತು 2 ರಂತಹ ಕಟ್ಟಿಗೆಗಳನ್ನು ನೀರು ಕಾಯಿಸಲು ಉಪಯೋಗಿಸುತ್ತಾರೆ ಅಂದರೆ ಸರಿ.

**ಮರುವಿಚಾರಣೆಃ- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ. ಸರಿ ಅದೆ.

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2026.02.04 11:09:13 +0530

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟೆ, ಉಪಸ್ಥಿತಿ- ಜಮಖಂಡಿ**

**ಸೇಷನ್ಸ್ ಕೇಸ್ ನಂ. 5035/2025**
**ಪಿಡಬ್ಲ್ಯೂ-3**
**ಸಿಡಬ್ಲ್ಯೂ-5**

| | |
|---|---|
| ಹೆಸರು | - ಯಮನಪ್ಪ ಶೆಟ್ಟೆಪ್ಪ ಅಂಗಡಗೇರಿ |
| ವಯಸ್ಸು | - 31 ವರ್ಷ |
| ಉದ್ಯೋಗ | - ವ್ಯವಸಾಯ |
| ವಾಸಸ್ಥಳ | - ಪಿ.ಎಂ.ಬುದ್ನಿ, ತಾಃ ಜಮಖಂಡಿ |

====

**ಸಾಕ್ಷಿಗೆ ಇಂದು ದಿನಾಂಕ 03.02.2026 ರಂದು ಪ್ರಮಾಣವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ**

ಆರೋಪಿ ನನಗೆ ಗೊತ್ತು. ಸುಮಾರು 1 ವರ್ಷದ ಹಿಂದೆ ಆರೋಪಿಯನ್ನು ಪೋಲಿಸರು ಮೃತಳ ಮನೆಯ ಬಳಿ ಕರೆದುಕೊಂಡು ಬಂದಿದ್ದರು. ಆಗ ಆರೋಪಿಯು ಮೃತಳನ್ನು ಹೊಡೆದು ಕೊಲೆಮಾಡಿದೆ ಎಂದು ಹೇಳಿದ. ಕಟ್ಟಿಗೆಯಿಂದ ಬಡಿದೆ ಎಂದು ಹೇಳಿದ. ಆರೋಪಿ ತೋರಿಸಿದ ಘಟನಾ ಸ್ಥಳದಲ್ಲಿ ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದು, ಘಟನಾಸ್ಥಳ ಪಂಚನಾಮೆ **ನಿ.ಪಿ.12** ರಂತೆ ಹಾಗೂ ನನ್ನ ಸಹಿ **ನಿ.ಪಿ.12(ಎ)** ರಂತೆ ಇದೆ. ಆ ಸಮಯದಲ್ಲಿ ಸ್ಥಳದಲ್ಲಿ ಫೋಟೋ ತೆಗೆದರು. ಅದೇ ಸ್ಥಳದಲ್ಲಿ **ಫೋಟೋ** ತೆಗೆದಿದ್ದಾರೆ, ಅವು **ನಿ.ಪಿ.13 ಮತ್ತು 14** ರಂತೆ ಇವೆ.

2. ನಂತರ ಆರೋಪಿಯು ಕೊಲೆಮಾಡುವಾಗ ತಾನು ತೊಟ್ಟಿದ್ದ ಬಟ್ಟೆಗಳನ್ನು ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ಆರೋಪಿಯ ಮನೆಗೆ ಪೋಲಿಸರೊಂದಿಗೆ ಹೋಗಿರುತ್ತೇನೆ. ನನ್ನ ಜೊತೆಗೆ ಒಬ್ಬ ಗೋಪಾಲ ಎನ್ನುವವರು ಬಂದರು. ಆ ಸಮಯದಲ್ಲಿ ಆರೋಪಿ ತನ್ನ ಮನೆಯ ಅಡುಗೆಮನೆಯಲ್ಲಿ ಇಟ್ಟಿದ್ದ, ಘಟನೆಯ ಸಮಯದಲ್ಲಿ ಆತ ತೊಟ್ಟಿದ್ದ ಶರ್ಟ ಹಾಗೂ ಪ್ಯಾಂಟನ್ನು ತೋರಿಸಿ ಹಾಜರುಪಡಿಸಿದ. **ಹಳದಿ ಬಣ್ಣದ ಶರ್ಟ ಮು.ಮಾ.7** ರಂತೆ ಹಾಗೂ **ಹಸಿರು ಮಿಶ್ರಿತ ಪ್ಯಾಂಟ ಮು.ಮಾ.8** ರಂತೆ ಇದೆ. **ಪಂಚನಾಮೆ ನಿ.ಪಿ.15** ರಂತೆ ಹಾಗೂ ನನ್ನ ಸಹಿ **ನಿ.ಪಿ.15(ಎ)** ರಂತೆ ಇದೆ. ಆ ಸಮಯದಲ್ಲಿ ತೆಗೆದ ಫೋಟೋ **ನಿ.ಪಿ.16** ರಂತೆ ಇದೆ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಪ್ರಸ್ತುತ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲಿಗೆ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಅಭಿಯೋಜನೆಯ ಪರ ಸರಕಾರಿ ಅಭಿಯೋಜಕರವರಿಂದ**

3. ಆರೋಪಿಯನ್ನು ಪೋಲಿಸರು ಸ್ಥಳಕ್ಕೆ ಕರೆದುಕೊಂಡ ಬಂದ ದಿನ 08.01.2025 ಇತ್ತು ಅಂದರೆ ಸರಿ. ಮೃತಳ ಮನೆಯ ಬಳಿ ಪಂಚನಾಮೆ ಮಾಡಿದಾಗ ಮಧ್ಯಾಹ್ನ 1 ಗಂಟೆಯಿಂದ 1.30 ಆಗಿತ್ತು ಅಂದರೆ ಸರಿ. ಅಲ್ಲಿಂದ ಆರೋಪಿ ತನ್ನ ಮನೆಗೆ ಕರೆದುಕೊಂಡು ಬಂದು ಪಂಚನಾಮೆ ಮಾಡಿದಾಗ, 1.30 ಯಿಂದ 1.55 ಗಂಟೆ ಆಗಿತ್ತು ಅಂದರೆ ಸರಿ. ಆ ಸಮಯದಲ್ಲಿ ವಿಡಿಯೋ ಚಿತ್ರೀಕರಣ ಸಹ ಮಾಡಿದ್ದಾರೆ ಅಂದರೆ ಸರಿ.

4. ದಿನಾಂಕ 10.01.2025 ರಂದು ಮಧ್ಯಾಹ್ನ 12 ಗಂಟೆಯಿಂದ 12.30 ಗಂಟೆಯವರೆಗೆ ಜಮಖಂಡಿ ಸಿ ಪಿ ಐ ರವರ ಕಚೇರಿಯಲ್ಲಿ ಪೇದೆ ತುಪ್ಪದ ರವರು ಮೃತಳ ಮರಣೋತ್ತರ ಪರೀಕ್ಷೆ ಕಾಲಕ್ಕೆ ಕಾಯ್ದಿರಿಸಿದ ರಕ್ತದ ಮಾದರಿಯನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ ಮೇರೆಗೆ ಅದನ್ನು ನನ್ನ ಹಾಗೂ ಗೋಪಾಲ ರವರ ಸಮಕ್ಷಮ ಪಂಚನಾಮೆ ಮಾಡಿ ವಶಪಡಿಸಿಕೊಂಡರು ಅಂದರೆ ಸರಿ. ಸದರಿ ಪಂಚನಾಮೆ ನಿ.ಪಿ.17 ರಂತೆ ನನ್ನ ಸಹಿ ನಿ.ಪಿ.17(ಎ) ರಂತೆ ಇದೆ. ವಶಪಡಿಸಿಕೊಂಡ ರಕ್ತದ ಮಾದರಿ ಮು.ಮಾ.9 ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಕಾಲಕ್ಕೆ ವಿಡಿಯೋ ಚಿತ್ರೀಕರಣ ಮಾಡಲಾಯಿತು. ವಿಡಿಯೋ ದೃಶ್ಯಾವಳಿಗಳನ್ನು ನಾನು ಗುರುತಿಸಬಲ್ಲೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ವ್ಹಿ ಬಿ ವಕೀಲರಿಂದ**

5. ನಾನು 12 ನೇ ತರಗತಿ ವರೆಗೆ ಓದಿದ್ದೇನೆ. ಚಾ.ಸಾ.1 ನನ್ನ ಗೆಳೆಯ ಅಂದರೆ ಸರಿ. ನಾನು ಹಾಗೂ ಚಾ.ಸಾ.1 ರವರು ಗುನ್ನೆಜಾಗೆಗೆ ಹೋಗಿದ್ದೆವು ಅಂದರೆ ಸರಿ. ಪೋಲಿಸರು ಅದೇ ದಿನ ನಮ್ಮ ಸಹಿಗಳನ್ನು ದಾಖಲೆಗಳ ಮೇಲೆ ಪಡೆದಿದ್ದಾರೆ ಅಂದರೆ ಸರಿ. ಗುನ್ನೆ ಜಾಗೆಯ ಪಂಚನಾಮೆ ಹಾಗೂ ಮಾಲುಜಪ್ತು ಪಂಚನಾವೆ ಸ್ಥಳದ ಚಕಬಂದಿ ನನಗೆ ಹೇಳಲಾಗುವುದಿಲ್ಲ. ಪೋಲಿಸರು ಬರೆದ ಮೇರೆಗೆ ನಾನು ಸಹಿ

**ಪಿಡಬ್ಲ್ಯೂ-3**
**ಸಿಡಬ್ಲ್ಯೂ-5**

ಮಾಡಿದ್ದೇನೆ. ವಿಡಿಯೋ ಚಿತ್ರೀಕರಣವನ್ನು ಪಿ ಎಸ್ ಐ ರವರು ಮೊಬೈಲಿನಲ್ಲಿ ಮಾಡಿರುತ್ತಾರೆ. ಯಾವ ಮೊಬೈಲ್ ನನಗೆ ಗೊತ್ತಿಲ್ಲ.

6. ನಿ.ಪಿ.15 ರಲ್ಲಿ 08.01.2024 ಎಂದು ಬರೆದಿದ್ದಾರೆ ಅಂದರೆ ಸರಿ. ನಿ.ಪಿ.17 ರಲ್ಲಿ ದಿನಾಂಕ 10.01.2025 ಎಂದು ಬರೆದಿದ್ದಾರೆ ಅಂದರೆ ಸರಿ. ನಿ.ಪಿ.12 ರಲ್ಲಿ ತಾರೀಖು ತಿದ್ದಿರುವುದು ಕಾಣುತ್ತದೆ. ಶವ ಬಿದ್ದಿದ್ದ ಜಾಗೆಯ ಚಕಬಂದಿ ಹೇಳಲು ಆಗುವುದಿಲ್ಲ. ಆರೋಪಿಯನ್ನು ದಿನಾಂಕ 07.01.2025 ರಂದು ಹಿಡಿದುಕೊಂಡು ಬಂದಿದ್ದರು.

7. ಆರೋಪಿಯನ್ನು ದಿನಾಂಕ 07.01.2025 ರಂದು ಹಿಡಿದುಕೊಂಡು ಬಂದಿರಲಿಲ್ಲ ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಫೋಟೋಗಳನ್ನು ತೆಗೆದಿಲ್ಲ ಮತ್ತು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಸಾಮಾನ್ಯವಾಗಿ ಕೊಲೆಮಾಡಿದವರು ಬಟ್ಟೆಗಳನ್ನು ಸುಟ್ಟುಹಾಕುತ್ತಾರೆ ಅಂದರೆ ಸರಿ. ಆರೋಪಿಯಿಂದ ವಶಪಡಿಸಿಕೊಂಡ ಬಟ್ಟೆಗಳು ಚೆನ್ನಾಗಿ ಇವೆ. ಸಾಮಾನ್ಯವಾಗಿ ಅಡುಗೆ ಮನೆ ಕಟ್ಟೆ, ಪರಸಿ ಒರೆಸಲು ಪ್ಯಾಂಟ ಅಥವಾ ಶರ್ಟನ್ನು ಉಪಯೋಗಿಸುತ್ತಾರೆ ಅಂದರೆ ಸರಿ. ಚಾ.ಸಾ.1 ನನ್ನ ಸ್ನೇಹಿತನಾಗಿರುವುದರಿಂದ ಆತನಿಗೆ ಅನುಕೂಲ ಮಾಡಲು ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ ಅಂದರೆ ಸರಿ.

**ಮರುವಿಚಾರಣೆ:- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ.ಕೇ. ಸರಿ ಅದೆ.

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2026.02.04 11:09:22 +0530

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.